ಇ&ಈ&ಉ) ಈಗಾಗಲೇ ಕಿತ್ತೂರನ್ನು ತಾಲ್ಲೂಕನ್ನಾಗಿ ಘೋಷಿಸಲಾಗಿರುತ್ತದೆ ಮೂಡಲಗಿ, ಕಾಗವಾಡ ಮತ್ತು ನಿಪ್ಪಾಣಿ ಪಟ್ಟಣಗಳನ್ನು ಹೊಸ ತಾಲ್ಲೂಕುಗಳೆಂದು ಘೋಷಿಸಲು ಎಂ.ಬಿ ಪ್ರಕಾಶ್ ಸಮಿತಿ ಶಿಫಾರಸ್ಸು ಮಾಡಿರುತ್ತದೆ. ರಾಜ್ಯದ ಹಣಕಾಸಿನ ಅನುಕೂಲತೆಯನ್ನು ಗಮನ ದಲ್ಲಿಟ್ಟುಕೊಂಡು ಹಂತ ಹಂತವಾಗಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಕೈಗೊಳ್ಳಲು ಆಯವ್ಯಯ ಭಾಷಣದಲ್ಲಿ ನಿರ್ಣಯಿಸಲಾಗಿದೆ

ಎಸ್.ಸಿ ಪಿ/ಟಿ ಎಸ್ ಸಿ. ಯೋಜನೆಗಳಡಿ ಕಾಂಕ್ರೇಟ್ ರಸ್ತೆ ಮತ್ತು ಒಳಚರಂಡಿ ನಿರ್ಮಾಣ

5 (55) ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ)

ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2011-12 ನೇ ಸಾಲಿನಲ್ಲಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಗೋಕಾಕ ತಾಲ್ಲೂಕಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿ ಗಳಲ್ಲಿ ಕಾಂಕ್ರಿಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡಲು ಮಂಜೂರಾಗಿರುವ ಮೊತ್ತವೆಷ್ಟು (ವಿವರಗಳನ್ನು ನೀಡುವುದು)

ಆ) ಈ ಯೋಜನೆಯಡಿ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಮತ್ತು ಈ ಕಾಮಗಾರಿಗಳ ಪ್ರಗತಿಯು ಯಾವ ಹಂತದಲ್ಲಿದೆ.

ಇ) ಈ ಯೋಜನೆಯಡಿ ಕೆಲವು ಕಾಮಗಾರಿಗಳು ಅಪೂರ್ಣವಾಗಿರುವುದು ಸಹಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅನುದಾನದ ಕೊರತೆಯೇನಾದರೂ ಇದೆಯೇ.

ಉ) ಹಾಗಿದ್ದಲ್ಲಿ ಕೊರತೆ ಇರುವ ಅನು-ದಾನವನ್ನು ಇದುವರೆವಿಗೆ ಬಿಡು ಗಡೆ ಮಾಡದಿರಲು ಕಾರಣಗಳೇನು

ಊ) ಈ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ಸರಕಾರ ಆದೇಶವೆನಾದರೂ ನೀಡಿದೆಯೇ

ಋ) ಹಾಗಿದ್ದಲ್ಲಿ ಕಾಮಗಾರಿಗಳನ್ನು ಸ್ಥಗಿತಗೊಳಿಸುವಂತೆ ಆದೇಶ ನೀಡಲು ಕಾರಣಗಳೇನು?

ಶ್ರೀ ಎಂ ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) 2011–12ನೇ ಸಾಲಿನಲ್ಲಿ ಎಸ್.ಸಿ.ಪಿ–ಟಿ.ಎಸ್.ಪಿ ಯೋಜನೆಯಡಿ ಗೋಕಾಕ ತಾಲ್ಲೂಕಿನ (ಘಟಪ್ರಭಾ, ಗೋಕಾಕ ಹಾಗೂ ಕೌಜಲಗಿ ವಿಭಾಗ ಸೇರಿ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಎಸ್ ಸಿ.ಪಿ ಅಡಿ ಒಟ್ಟು ರೂ.3635.00 ಲಕ್ಷ ಮೊತ್ತದ ಹಾಗೂ ಟಿ ಎಸ್.ಪಿ ಅಡಿ ರೂ..1135.00 ಲಕ್ಷ ಮೊತ್ತದ ಕಾಮಗಾರಿಗಳು ಮಂಜೂರಾಗಿದೆ ಸದರಿ ಕಾಮಗಾರಿವಾರು ವಿವರಗಳು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.

ಕ್ರ.ಸಂ	ಯೋಜನೆ ಹೆಸರು	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷ)
1.	ಎಸ್.ಸಿ.ಪಿ	204	3635.00
2	ಟಿ ಎಸ್ ಪಿ	69	1135.00

ಮೇಲಿನಂತೆ ಎರಡೂ ಯೋಜನೆಗಳಲ್ಲಿ ವಿಶೇಷ ಘಟಕ ಯೋಜನೆಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣದ 204 ಕಾಮಗಾರಿಗಳಿಗೆ ರೂ.36.35 ಕೋಟಿ ಹಾಗೂ ಗಿರಿಜನ ಉಪಯೋಜನೆಯ 69 ಕಾಮಗಾರಿಗಳಿಗೆ ರೂ.11 35 ಕೋಟಿಗಳ ಪ್ರಸ್ತಾವನೆಗಳು ಅನುಮೋದನೆ ಯಾಗಿರುತ್ತವೆ ಎಸ್ ಸಿ ಪಿ.ಅಡಿ ಒಟ್ಟು 204 ಕಾಮಗಾರಿಗಳ ಪೈಕಿ ಒಟ್ಟು 151 ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಟಿ ಎಸ್ ಪಿ. ಅಡಿ ಒಟ್ಟು 69 ಕಾಮಗಾರಿಗಳ ಪೈಕಿ 52

ಕಾಮಗಾರಿಗಳು ಪೂರ್ಣ ಗೊಂಡಿವೆ. ಕಾಮಗಾರಿಗಳು ಪೂರ್ಣಗೊಂಡಿವೆ. ಬಾಕಿ ಕಾಮಗಾರಿ ಗಳು ಪ್ರಗತಿಯಲ್ಲಿರುತ್ತದೆ

ಆ) ಈ ಯೋಜನೆಗಳಡಿ ಸಮುದಾಯ ಭವನ ನಿರ್ಮಾಣ, ರಸ್ತೆ ಮತ್ತು ಚರಂಡಿ ನಿರ್ಮಾಣ ಹಾಗೂ ಕಾಲುವೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ, ಕೈಗೆತ್ತಿಕೊಳ್ಳಲಾದ ಕಾಮಗಾರಿಗಳು ಪ್ರಗತಿಯಲ್ಲಿದ್ದು ಬಹುತೇಕ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ (ಸಮುದಾಯ ಭವನ ಕಾಮಗಾರಿಗಳ ಟೆಂಡರ ಕರೆಗಳು 4–5 ಸಾಲಿ ಪುನರಾವರ್ತನೆಯಾಗಿದ್ದರಿಂದ ಅನುಷ್ಠಾನದಲ್ಲಿ ವಿಳಂಬವಾಗಿರುತ್ತವೆ.)

ಇ) 2011–12ನೇ ಸಾಲಿನ ಕಾಮಗಾರಿಗಳಿಗೆ ಸರ್ಕಾರವು ಅನುದಾನವನ್ನು ಬಿಡುಗಡೆಗೊಳಿಸಿದ್ದು ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಈ) 2011–12ನೇ ಸಾಲಿನಲ್ಲಿನ ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತದೆ

ಉ) 2011–12ನೇ ಸಾಲಿನ ಕಾಮಗಾರಿಗಳಿಗೆ ಅನುದಾನದ ಕೊರತ ಇರುವುದಿಲ್ಲ

ಊ) 2011–12ನೇ ಸಾಲಿನ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಸ್ಥಗಿತ ಗೊಳಿಸಲು ಸರ್ಕಾರವು ಯಾವುದೇ ಆದೇಶವನ್ನು ನೀಡಿರುವುದಿಲ್ಲ.

ಋ) ಅನ್ವಯಿಸುವುದಿಲ್ಲ.

ಒಳನಾಡು ಮೀನುಗಾರಿಕೆ ಅಭಿವೃದ್ಧಿ

6 (56) ಶ್ರೀ ಬಾಲಕೃಷ್ಣ ಸಿ.ಎನ್ (ಶ್ರವಣಬೆಳಗೊಳ) ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?